# ನಿಮ್ಮೊಡನೆ

## ಪರಿಸರ ಸಂರಕ್ಷಣೆ: ಸರ್ಕಾರ, ಸಮುದಾಯ ಜವಾಬ್ದಾರಿ ಮರೆತರೆ ಉಳಿಗಾಲವಿಲ್ಲ

**ದೇಶದಲ್ಲಿ ಪರಿಸರ ಸಂರಕ್ಷಣೆಗೆ ಆಂದೋಲನಗಳು ನಡೆಯುತ್ತಲೇ ಇವೆ. ಅದರ ಸಂರಕ್ಷಣೆಗೆ ಕಠಿಣ ಕಾನೂನುಗಳೂ ಇವೆ. ಸುಪ್ರೀಂ ಕೋರ್ಟ್, ಹಸಿರು ನ್ಯಾಯಮಂಡಳಿ ಸರ್ಕಾರಗಳಿಗೆ ಮೇಲಿಂದ ಮೇಲೆ ಚಾಟಿ ಬೀಸುತ್ತಲೇ ಇವೆ. ಹೀಗಿದ್ದೂ ಯಾವುದೇ ಸಂರಕ್ಷಣಾ ಕ್ರಮಗಳು ಜರುಗದೆ ಪರಿಸರದ ಗುಣಮಟ್ಟ ಕುಸಿಯುತ್ತಿರುವುದು ಕಳವಳಕಾರಿ.**

ಪರಿಸರ ಸಂರಕ್ಷಣೆಯ ಸೂಚ್ಯಂಕದಲ್ಲಿ ಭಾರತದ ಸಾಧನೆ ತೃಪ್ತಿಕರವಾಗಿಲ್ಲ. ಜಗತ್ತಿನ 180 ದೇಶಗಳ ಪರಿಸರದ ಸ್ಥಿತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ಅಲ್ಲಿ ದೊರೆತ ಅಂಕಗಳ ಆಧಾರದ ಮೇಲೆ ನಮ್ಮ ದೇಶಕ್ಕೆ 168ನೇ ಸ್ಥಾನ ಲಭಿಸಿದೆ. ದಕ್ಷಿಣ ಏಷ್ಯಾದ ರಾಷ್ಟ್ರಗಳಲ್ಲಿ ಅಫ್ಗಾನಿಸ್ತಾನವನ್ನು ಹೊರತುಪಡಿಸಿದರೆ ಮಿಕ್ಕೆಲ್ಲ ರಾಷ್ಟ್ರಗಳೂ ಭಾರತಕ್ಕಿಂತಲೂ ಉತ್ತಮವಾದ ಸಾಧನೆ ಮಾಡಿವೆ. ಅಮೆರಿಕದ ಯಾಲೆ ಮತ್ತು ಕೊಲಂಬಿಯಾ ವಿಶ್ವವಿದ್ಯಾಲಯಗಳು ಜಂಟಿಯಾಗಿ ಈ ಸೂಚ್ಯಂಕವನ್ನು ಸಿದ್ಧಪಡಿಸಿವೆ. ಜಗತ್ತಿನ ಎಲ್ಲ ರಾಷ್ಟ್ರಗಳ ಪರಿಸರದ ಗುಣಮಟ್ಟವನ್ನು ಅರಿಯಲು ಈ ಸೂಚ್ಯಂಕವು ಒಂದು ವಿಶ್ವಾಸಾರ್ಹ ಮೂಲವಾಗಿದ್ದು, ಪರಿಸರ ಸಂಬಂಧಿ ನೀತಿ ನಿರೂಪಣೆಗಳಿಗೂ ಸಹಕಾರಿ. ಜೀವ ವೈವಿಧ್ಯ, ವಾಯು ಗುಣಮಟ್ಟ, ಪರಿಶುದ್ಧ ನೀರಿನ ಲಭ್ಯತೆ ಹಾಗೂ ನೈರ್ಮಲ್ಯದ ವಾತಾವರಣ ಸೇರಿದಂತೆ 32 ಪರಿಸರ ಸಂಬಂಧಿ ಸೂಚಕಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಸಾಧನೆಯ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ವಾಯು ಗುಣಮಟ್ಟ, ನೈರ್ಮಲ್ಯ ಕಾಪಾಡುವಿಕೆ, ಕುಡಿಯುವ ನೀರು ಪೂರೈಕೆ, ಭಾರ ಲೋಹ ಮತ್ತು ಘನತ್ಯಾಜ್ಯ ನಿರ್ವಹಣೆಯಲ್ಲಿ ಭಾರತಕ್ಕೆ ತುಂಬಾ ಕಡಿಮೆ ಅಂಕಗಳು ಬಂದಿವೆ. ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಯಾವ ಅಂಶಗಳತ್ತ ತೀವ್ರವಾಗಿ ಗಮನಹರಿಸುವ ಅಗತ್ಯವಿದೆಯೋ ಅವುಗಳನ್ನು ಇಡೀ ದೇಶ ಸಂಪೂರ್ಣ ನಿರ್ಲಕ್ಷ್ಯಿಸಿರುವುದು ಸುಸ್ಪಷ್ಟ.

ಪರಿಸರವನ್ನು ಕಾಪಾಡಿಕೊಳ್ಳುವಲ್ಲಿ ಭಾರತದ ಕಳಪೆ ಸಾಧನೆ ಇದೇ ಮೊದಲೇನಲ್ಲ. ಈ ಹಿಂದೆ ಗ್ಲೋಬಲ್ ಬರ್ಡನ್ ಆಫ್ ಡಿಸೀಸ್ (ಜಿಬಿಡಿ) ಸಮೀಕ್ಷೆಯೂ ದೇಶದಲ್ಲಿನ ಪರಿಸರ ನಿರ್ಲಕ್ಷ್ಯದ ಬಗ್ಗೆ ಬೆಟ್ಟುಮಾಡಿತ್ತು. ದೇಶದಲ್ಲಿ ಸಂಭವಿಸುವ ಪ್ರತೀ ಎಂಟು ಸಾವುಗಳಲ್ಲಿ ಒಂದು, ವಾಯುಮಾಲಿನ್ಯದ ಕಾರಣದಿಂದ ಆಗುತ್ತಿದ್ದು, ಉಸಿರಾಡಲು ಶುದ್ಧಗಾಳಿಯಿಲ್ಲದೆ ಭಾರತೀಯರ ಸರಾಸರಿ ಆಯಸ್ಸು 1.7 ವರ್ಷಗಳಷ್ಟು ಕಡಿಮೆಯಾಗಿದೆ ಎನ್ನುವುದು ಆ ಸಮೀಕ್ಷೆಯ ತಿರುಳು. ಶ್ವಾಸಕೋಶದ ಕ್ಯಾನ್ಸರ್, ಹೃದಯಾಘಾತ, ಪಾರ್ಶ್ವವಾಯು, ಉಸಿರಾಟದ ತೊಂದರೆ ಹಾಗೂ ಮಧುಮೇಹದಂತಹ ಗಂಭೀರ ಆರೋಗ್ಯ ಸಮಸ್ಯೆಗಳನ್ನು ವಾಯುಮಾಲಿನ್ಯದ ವಿಷವರ್ತುಲ ತಂದೊಡ್ಡುತ್ತಿರುವುದು ಮೇಲಿಂದ ಮೇಲೆ ದೃಢಪಡುತ್ತಲೇ ಇದೆ.

ಕಟ್ಟಡ ನಿರ್ಮಾಣ ಕಾಮಗಾರಿ ಹಾಗೂ ರಸ್ತೆಗಳ ಅಸಮರ್ಪಕ ನಿರ್ವಹಣೆಯಿಂದ ಏಳುವ ದೂಳು, ವಾಹನಗಳು ಹೊರಸೂಸುವ ಇಂಗಾಲ, ಕಸ ಮತ್ತು ಬೆಳೆಯ ತ್ಯಾಜ್ಯಕ್ಕೆ ಬೆಂಕಿ ಹಾಕುವುದರಿಂದ ಆವರಿಸುವ ಹೊಗೆ – ಇವು ದೇಶದ ಪರಿಸರವನ್ನೇ ಸಂಪೂರ್ಣ ಮಾಲಿನ್ಯಗೊಳಿಸಿದ್ದು ಸುಳ್ಳಲ್ಲ. ಅತೀ ಹೆಚ್ಚು ಮಾಲಿನ್ಯದಿಂದ ಬಳಲುತ್ತಿರುವ ದೇಶದ ಮಹಾನಗರಗಳಲ್ಲಿ ಬೆಂಗಳೂರು ಕೂಡ ಒಂದು. 'ಗ್ಯಾಸ್ ಚೇಂಬರ್' ಆಗಲು ನವದೆಹಲಿ ಜತೆ ಅದೀಗ ಪೈಪೋಟಿಗೆ ಇಳಿದಂತಿದೆ. ಇಂಗಾಲದ ಹೆಜ್ಜೆಗುರುತು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವುದು 'ಉದ್ಯಾನನಗರಿ' ಖ್ಯಾತಿಯ ಬೆಂಗಳೂರಿನ ಜ್ವಲಂತ ಸಮಸ್ಯೆ.

ಮಳೆನೀರು ಸಂಗ್ರಹ ಕಡ್ಡಾಯದ ನಿಯಮ ಕಾಗದದಲ್ಲಿ ಮಾತ್ರ ಇದೆ. ಅಲ್ಲದೆ, ನಗರಗಳಲ್ಲಿ ಮಳೆ ನೀರು ಇಂಗಿಸುವಂತಹ ವ್ಯವಸ್ಥೆ ಎಲ್ಲಿಯೂ ಇಲ್ಲ. ನೂರಾರು ಟಿಎಂಸಿ ಅಡಿಗಳಷ್ಟು ಪರಿಶುದ್ಧ ನೀರು ವ್ಯರ್ಥವಾಗಿ ಚರಂಡಿಗಳ ಪಾಲಾಗುತ್ತಿದೆ. ಮಳೆನೀರು ಸಂಗ್ರಹ, ಅಂತರ್ಜಲ ಸಂರಕ್ಷಣೆಯಂತಹ ವಿಚಾರಗಳಲ್ಲಿ ಜನಸಮುದಾಯದಲ್ಲಿ ಒಂದು ನೈತಿಕ ಪ್ರಜ್ಞೆ ಇಲ್ಲ. ಕೆರೆಗಳ ಬಫರ್ (ಮೀಸಲು) ವಲಯವನ್ನು ಪ್ರವಾಹ ತಡೆಯುವ ನೈಸರ್ಗಿಕ ಬೋಗುಣಿ ಎಂದೇ ಗುರುತಿಸಲಾಗಿದೆ. ಈ ಭೂಭಾಗಗಳು ಒಡಲಲ್ಲಿ ನೀರನ್ನು ಹಿಡಿದಿಟ್ಟುಕೊಳ್ಳುವ ಮೂಲಕ ಅಂತರ್ಜಲಮಟ್ಟ ಹೆಚ್ಚಳಕ್ಕೆ ಕಾರಣವಾಗುತ್ತವೆ. ಕೆರೆಗಳಂತಹ ಪರಿಸರ ಸೂಕ್ಷ್ಮ ಪ್ರದೇಶಗಳನ್ನು ಸಂರಕ್ಷಿಸಬೇಕಾದ ಸರ್ಕಾರವೇ ಬಫರ್ ವಲಯವನ್ನು ಕಡಿಮೆ ಮಾಡುವಂತೆ ಕಾನೂನುಸಮರ ನಡೆಸಿದ ಉದಾಹರಣೆ ನಮ್ಮ ಕಣ್ಣಮುಂದೆಯೇ ಇದೆ.

ಭಾರತದಲ್ಲಿ ಇತ್ತೀಚೆಗೆ ಪರಿಸರ ಸಂರಕ್ಷಣೆ ಆಂದೋಲನಗಳು ಹೆಚ್ಚಾಗಿ ನಡೆಯುತ್ತಿವೆ. ಪರಿಸರ ಸಂರಕ್ಷಣೆಗೆ ಕಠಿಣ ಕಾನೂನುಗಳೂ ಇವೆ. ಸುಪ್ರೀಂ ಕೋರ್ಟ್, ಹಸಿರು ನ್ಯಾಯಮಂಡಳಿ ಸಹ ಸರ್ಕಾರಗಳಿಗೆ ಮೇಲಿಂದ ಮೇಲೆ ಚಾಟಿ ಬೀಸುತ್ತಲೇ ಇವೆ. ಹೀಗಿದ್ದೂ ಯಾವುದೇ ಸಂರಕ್ಷಣಾ ಕ್ರಮಗಳು ಜರುಗದೆ ಪರಿಸರದ ಗುಣಮಟ್ಟ ಕುಸಿಯುತ್ತಿರುವುದು ಕಳವಳಕಾರಿ.

ಗ್ರಾಮಾಂತರ ಭಾಗದ ಪ್ರತೀ ಮನೆಗೂ ಜೈವಿಕ ಅನಿಲ ಇಲ್ಲವೆ ಸೌರಶಕ್ತಿ ಸೌಲಭ್ಯದ ಒಲೆಗಳನ್ನು ಪೂರೈಸಬೇಕು. ಬೆಳೆಯ ತ್ಯಾಜ್ಯವನ್ನು ಸುಡುವ ಬದಲು ಭೂಮಿಯಲ್ಲೇ ಕೊಳೆಯುವಂತೆ ಮಾಡಿದರೆ ಒಳ್ಳೆಯ ಗೊಬ್ಬರವಾಗುತ್ತದೆ ಎಂಬ ಅರಿವನ್ನು ಜನರಲ್ಲಿ ಮೂಡಿಸಬೇಕು. ಮಳೆನೀರು ಸಂಗ್ರಹ ಕಡ್ಡಾಯದ ನಿಯಮವು ಕಾಗದದಿಂದ ಕೃತಿರೂಪಕ್ಕೆ ಇಳಿಯಬೇಕು. ಕಾಡು–ಜಲಮೂಲಗಳ ಅತಿಕ್ರಮಣ ತಪ್ಪಬೇಕು. ಇ–ವಾಹನಗಳ ಬಳಕೆ ಹೆಚ್ಚಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಸರ್ಕಾರ ಕುಂಭಕರ್ಣ ನಿದ್ದೆಯಿಂದ ಎಚ್ಚರಗೊಳ್ಳಬೇಕು.

**■ ಪ್ರವೀಣ ಕುಲಕರ್ಣಿ**

